**ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಕುಣಿಗಲ್**

**ಉಪಸ್ಥಿತರು: ಶ್ರೀ ಮಂಜುನಾಥ ಶಿವಪೂಜಿ**
**ಬಿ.ಎ.ಎಲ್.ಎಲ್.ಬಿ.,**
ಅಧಿಕ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ
ದರ್ಜೆ ನ್ಯಾಯಿಕ ದಂಡಾಧಿಕಾರಿಗಳು

**ಸಿ.ಸಿ. ನಂಃ 7974/2023**

**ದಿನಾಂಕಃ 25 ನೇ ಜುಲೈ ಮಾಹೆ – 2026**

**ಫಿರ್ಯಾದುದಾರರು :** **ಕರ್ನಾಟಕ ಸರ್ಕಾರವನ್ನು ಪ್ರತಿನಿಧಿಸುವವರು**
**ಪೊಲೀಸ್ ಉಪನಿರೀಕ್ಷಕರು**
ಅಮೃತೂರು ಪೊಲೀಸ್ ಠಾಣೆ, ಅಮೃತೂರು
(ಪ್ರತಿನಿಧಿಸುವವರು ಮಾನ್ಯ ಸಹಾಯಕ ಸರ್ಕಾರಿ
ಅಭಿಯೋಜಕರು)

***–ವಿರುದ್ಧ–***

**ಆರೋಪಿ :** **ಲಿಖಿತ ಹೆಚ್ ಎಂ ಬಿನ್ ಮಂಚೇಗೌಡ**
ವಯಸ್ಸು 22 ವರ್ಷ,
ವಾಸಃ ನಂ.20/1, 1 ನೇ ಎ ಮೇನ್,
ಬಿ, ದೋಬಿ ರಂಗಪ್ಪ ಹೌಸ್, ದೀಪಾಂಜಲಿ ನಗರ,
ತುಮಕೂರು.

**(ಆರೋಪಿ ಪರ ಶ್ರೀ.ಎ.ಆರ್ ವಕೀಲರು)**

| | |
|---|---|
| **ಪ್ರಕರಣ ದಾಖಲಾದ ದಿನಾಂಕ** | 05.07.2023 |
| **ಪ್ರಕರಣದ ಸ್ವರೂಪ** | ಭಾರತೀಯ ದಂಡ ಸಂಹಿತೆ ಕಲಂ 279, 337, 304(ಎ) ಐಪಿಸಿ ಕಾಯ್ದೆ |
| **ವಿಚಾರಣೆ ಪ್ರಾರಂಭವಾದ ದಿನಾಂಕ** | 27.07.2024 |
| **ವಿಚಾರಣೆ ಮುಕ್ತಾಯವಾದ ದಿನಾಂಕ** | 22.06.2026 |
| **ತೀರ್ಪು ನೀಡಿದ ದಿನಾಂಕ** | 25.07.2026 |
| **ಪ್ರಕರಣದ ಒಟ್ಟು ಕಾಲಾವಧಿ** | ವರ್ಷ ತಿಂಗಳು ದಿನಗಳು<br>03 00 20 |

## ತೀರ್ಪು

ಅಮೃತೂರು ಪೊಲೀಸ್ ಠಾಣೆಯ ಠಾಣಾಧಿಕಾರಿಯು ಮೇಲ್ಕಂಡ ಆರೋಪಿಯ ವಿರುದ್ಧ ಭಾ.ದಂ.ಸಂ.ಕಲಂ. 279, 337 ಮತ್ತು 304(ಎ) ಐಪಿಸಿ ಕಾಯ್ದೆ ಅಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ಎಸಗಿರುತ್ತಾರೆಂದು ಪ್ರಸ್ತುತ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ

2. **ಅಭಿಯೋಜನೆಯ ಪ್ರಕರಣದ ಸಂಕ್ಷಿಪ್ತ ವಿವರಗಳು ಈ ಕೆಳಕಂಡಂತಿರುತ್ತವೆಃ-**

ದಿನಾಂಕಃ 04.07.2023 ರಂದು ಸಂಜೆ ಸುಮಾರು 07.30 ಗಂಟೆ ಸಮಯದಲ್ಲಿ, ಅಮೃತೂರು ಪೋಲಿಸ್ ಠಾಣಾ ವ್ಯಾಪ್ತಿಯ ಮಾಗಡಿ ಪಾಳ್ಯದ ಸಂತೋಷ ಬಿನ್ ಮಾಯಣ್ಣ ರವರ ಅಂಗಡಿ ಮತ್ತು ವಾಸದ ಮನೆ ನೇರದಲ್ಲಿ ಹಾದು ಹೋಗಿರುವ ಮಂಗಳೂರು-ಬೆಂಗಳೂರು ಎನ್.ಹೆಚ್- 75 ರ ಸಾರ್ವಜನಿಕ ರಸ್ತೆಯಲ್ಲಿ ಆರೋಪಿಯು ತನ್ನ ಬಾಬ್ತು KA-02/KK-1206 ನೇ ನಂಬರಿನ ದ್ವಿಚಕ್ರ ವಾಹನದಲ್ಲಿ ತಾನು ಚಾಲಕನಾಗಿ ಹಿಂಬದಿಯಲ್ಲಿ ಚಾಸಾ.3 ರವರನ್ನು ಕೂರಿಸಿಕೊಂಡು ಯಡಿಯೂರು ಕಡೆಯಿಂದ ಕುಣಿಗಲ್ ಕಡೆಗೆ ಹೋಗಲು ತನ್ನ ದ್ವಿಚಕ್ರ

ವಾಹನವನ್ನು ಅತೀ ವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ರಸ್ತೆಯ ಎಡಭಾಗದ ಪುಟ್ಪಾತ್ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದ ಮೋಹನ್ .ಪಿ. ಮಾಂಡೇಕರ್ ರವರಿಗೆ ಡಿಕ್ಕಿ ಹೊಡೆಸಿ ಅಪಘಾತಪಡಿಸಿದ ಪರಿಣಾಮ ಮೋಹನ್ .ಪಿ. ಮಾಂಡೇಕರ್ ರವರಿಗೆ ತಲೆಗೆ ತೀವ್ರ ರಕ್ತಗಾಯವಾಗಿ, ಎಡ ಮೊಣಕಾಲು ಮುರಿದು, ಎರಡೂ ಕಿಬ್ಬೊಟ್ಟೆಗಳಲ್ಲಿ ಮತ್ತು ಎಡ ತೋಳಿನಲ್ಲಿ ಒತ್ತಿದ ಗಾಯಗಳಾಗಿ, ಎಡ ಕಿವಿಯಿಂದ ರಕ್ತ ಬಂದಿದ್ದು, ಗಾಯಾಳು ಮೋಹನ್ ಪಿ ಮಾಂಡೇಕರ್ ರವರನ್ನು 108 ಅಂಬುಲೆನ್ಸ್ ನಲ್ಲಿ ಚಿಕಿತ್ಸೆಗಾಗಿ ಕುಣಿಗಲ್ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದಾಗ ರಾತ್ರಿ ಸುಮಾರು 8-00 ಗಂಟೆ ಸಮಯದಲ್ಲಿ ಕುಣಿಗಲ್ ಸರ್ಕಾರಿ ಆಸ್ಪತ್ರೆಯ ಗೇಟ್ ಬಳಿ ಮೃತಪಟ್ಟಿದ್ದು ಮತ್ತು ಆರೋಪಿಗೆ ಸಹ ಈ ಅಪಘಾತದಿಂದ ಬಲಗಡೆಯ ಹಣೆಗೆ, ಮೂಗಿಗೆ, ಎಡ ಮೊಣಕಾಲಿನ ಮಂಡಿಗೆ ಮತ್ತು ಬಲ ಮೊಣಕಾಲಿನ ಮಂಡಿಗೆ ಸಾಮಾನ್ಯ ಸ್ವರೂಪದ ಗಾಯಗಳಾಗಿರುತ್ತವೆ ಎಂಬುದಾಗಿ ನೀಡಿದ ದೂರಿನ ಮೇಲೆ ಪೊಲೀಸರು ಇತರೆ ತನಿಖೆ ಕೈಗೊಂಡು ಮೇಲ್ಕಂಡ ಆರೋಪಿಯ ವಿರುದ್ಧ ಭಾ.ದಂ.ಸಂ.ಕಲಂ 279, 337 ಮತ್ತು 304(ಎ) ಐಪಿಸಿ ಕಾಯ್ದೆ ಅಡಿಯಲ್ಲಿ ತನಿಖೆಯನ್ನು ಪೂರ್ಣಗೊಳಿಸಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

3. ಆರೋಪಿಯು ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನಿನ ಮೇಲೆ ಬಿಡುಗಡೆಗೊಂಡಿರುತ್ತಾರೆ. ಆರೋಪಿಗೆ ದಂಡ ಪ್ರಕ್ರಿಯಾ ಸಂಹಿತೆ ಕಲಂ 207 ರಡಿಯಲ್ಲಿ ಅಭಿಯೋಜನೆಯ ದಾಖಲೆಗಳನ್ನು ಪೂರೈಸಲಾಗಿದೆ. ನಂತರ ಭಾ.ದಂ.ಸಂ.ಕಲಂ.279, 337 ಮತ್ತು 304(ಎ) ಐಪಿಸಿ ಕಾಯ್ದೆ ಅಡಿಯಲ್ಲಿ ಆರೋಪಿಯ ವಿರುದ್ಧ ಆಪಾದನೆಯ

ಸಾರಾಂಶವನ್ನು ರಚಿಸಿ, ಓದಿ ಹೇಳಲಾಯಿತು. ಆರೋಪಿಯು ತಪ್ಪನ್ನು ಒಪ್ಪಿಕೊಳ್ಳದೇ ವಿಚಾರಣೆಯಾಗಬೇಕೆಂದು ತಿಳಿಸಿರುತ್ತಾರೆ.

4. ನಂತರ ಅಭಿಯೋಜನೆಯವರು ತಮ್ಮ ಪರ ಪ್ರಾಸಾ-1 ರಿಂದ 4 ಸಾಕ್ಷಿದಾರರನ್ನು ನ್ಯಾಯಾಲಯದ ಮುಂದೆ ವಿಚಾರಣೆ ಮಾಡಿಕೊಂಡು ನಿಪಿ-1 ರಿಂದ 13 ನಿಶಾನೆಗಳನ್ನು ಗುರುತಿಸಿದ್ದು, ಶವ ತನಿಖಾ ವರದಿ, ಶವ ಪರೀಕ್ಷಾ ವರದಿ , ಗಾಯದ ಪ್ರಮಾಣ ಪತ್ರ , ಐ ಎಂ ವಿ ವರದಿ, ನೋಟಿಸ್ , ಪ್ರತ್ಯುತ್ತರ ಮತ್ತು ನಷ್ಟ ಭರ್ತಿ ಪತ್ರಗಳನ್ನು ಆರೋಪಿಯ ಸಮ್ಮತಿ ಮೇರೆಗೆ ನಿಪಿ.7 ರಿಂದ 13 ಎಂದು ಗುರುತಿಸಲಾಗಿದೆ. ಚಾಸಾ.5 ರಿಂದ 17 ಕೈ ಬಿಡಲಾಯಿತು. ಕಲಂ 313 ಸಿ.ಆರ್.ಪಿ.ಸಿ ಅಡಿಯಲ್ಲಿ ದಾಖಲಿಸಿಕೊಳ್ಳ ಬೇಕಾದ ಹೇಳಿಕೆಯನ್ನು ಕೈಬಿಡಲಾಯಿತು.

5. ನಂತರ ವಾದ, ಪ್ರತಿವಾದಗಳನ್ನು ಆಲಿಸಲಾಯಿತು. ಕೆಳಕಂಡ ಅಂಶಗಳು ಪ್ರಕರಣದ ಇತ್ಯರ್ಥಕ್ಕಾಗಿ ಮೂಡಿ ಬಂದಿತು.

> 1. ದಿನಾಂಕಃ 04.07.2023 ರಂದು ಸಂಜೆ ಸುಮಾರು 07.30 ಗಂಟೆ ಸಮಯದಲ್ಲಿ, ಅಮೃತೂರು ಪೋಲಿಸ್ ಠಾಣಾ ವ್ಯಾಪ್ತಿಯ ಮಾಗಡಿ ಪಾಳ್ಯದ ಸಂತೋಷ ಬಿನ್ ಮಾಯಣ್ಣ ರವರ ಅಂಗಡಿ ಮತ್ತು ವಾಸದ ಮನೆ ನೇರದಲ್ಲಿ ಹಾದು ಹೋಗಿರುವ ಮಂಗಳೂರು-ಬೆಂಗಳೂರು ಎನ್.ಹೆಚ್- 75 ರ ಸಾರ್ವಜನಿಕ ರಸ್ತೆಯಲ್ಲಿ ಆರೋಪಿಯು ತನ್ನ ಬಾಬ್ತು KA-02/KK-1206 ನೇ ನಂಬರಿನ ದ್ವಿಚಕ್ರ ವಾಹನದಲ್ಲಿ ತಾನು ಚಾಲಕನಾಗಿ ಹಿಂಬದಿಯಲ್ಲಿ ಚಾಸಾ.3 ರವರನ್ನು ಕೂರಿಸಿಕೊಂಡು ಯಡಿಯೂರು ಕಡೆಯಿಂದ ಕುಣಿಗಲ್ ಕಡೆಗೆ ಹೋಗಲು ತನ್ನ ದ್ವಿಚಕ್ರ ವಾಹನವನ್ನು ಅತೀ ವೇಗ ಮತ್ತು

ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ರಸ್ತೆಯ ಎಡಭಾಗದ ಪುಟ್ಪಾತ್ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದ ಮೋಹನ್ .ಪಿ. ಮಾಂಡೇಕರ್ ರವರಿಗೆ ಡಿಕ್ಕಿ ಹೊಡೆಸಿ ಅಪಘಾತಪಡಿಸಿದ್ದು , ಆ ಮೂಲಕ ಭಾ.ದಂ.ಸಂ. 279 ರ ಪ್ರಕಾರ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆ ಎಂಬುದನ್ನು ಅಭಿಯೋಜನೆಯವರು ಸಂಶಯತೀತವಾಗಿ ರುಜುವಾತು ಪಡಿಸುತ್ತಾರೆಯೇ ?

2. ಅದೇ ದಿನ, ಸ್ಥಳ ಮತ್ತು ಸಮಯದಂದು ಅಪಘಾತ ಪಡಿಸಿದ ಪರಿಣಾಮ ಆರೋಪಿಗೆ ಬಲಗಡೆಯ ಹಣೆಗೆ, ಮೂಗಿಗೆ, ಎಡ ಮೊಣಕಾಲಿನ ಮಂಡಿಗೆ ಮತ್ತು ಬಲ ಮೊಣಕಾಲಿನ ಮಂಡಿಗೆ ಸಾಮಾನ್ಯ ಸ್ವರೂಪದ ಗಾಯವಾಗಿದ್ದು, ಆ ಮೂಲಕ ಭಾ.ದಂ.ಸಂ. 337 ರ ಪ್ರಕಾರ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆ ಎಂಬುದನ್ನು ಅಭಿಯೋಜನೆಯವರು ಸಂಶಯತೀತವಾಗಿ ರುಜುವಾತು ಪಡಿಸುತ್ತಾರೆಯೇ ?

3. ಅದೇ ದಿನ, ಸ್ಥಳ ಮತ್ತು ಸಮಯದಂದು ಆರೋಪಿಯು ಅಪಘಾತ ಪಡಿಸಿದ ಪರಿಣಾಮ ಮೋಹನ್ .ಪಿ. ಮಾಂಡೇಕರ್ ರವರಿಗೆ ತಲೆಗೆ ತೀವ್ರ ರಕ್ತಗಾಯವಾಗಿ, ಎಡ ಮೊಣಕಾಲು ಮುರಿದು, ಎರಡೂ ಕಿಬ್ಬೊಟ್ಟೆಗಳಲ್ಲಿ ಮತ್ತು ಎಡ ತೋಳಿನಲ್ಲಿ ಒತ್ತಿದ ಗಾಯಗಳಾಗಿ, ಎಡ ಕಿವಿಯಿಂದ ರಕ್ತ ಬಂದಿದ್ದು, ಗಾಯಾಳು ಮೋಹನ್ ಪಿ ಮಾಂಡೇಕರ್ ರವರನ್ನು 108 ಅಂಬುಲೆನ್ಸ್ ನಲ್ಲಿ ಚಿಕಿತ್ಸೆಗಾಗಿ ಕುಣಿಗಲ್ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದಾಗ ರಾತ್ರಿ ಸುಮಾರು 8-00 ಗಂಟೆ ಸಮಯದಲ್ಲಿ ಕುಣಿಗಲ್ ಸರ್ಕಾರಿ ಆಸ್ಪತ್ರೆಯ ಗೇಟ್ ಬಳಿ ಮೃತಪಟ್ಟಿದ್ದು, ಆ ಮೂಲಕ ಭಾ.ದಂ.ಸಂ.304(ಎ) ರ ಪ್ರಕಾರ ಶಿಕ್ಷಾರ್ಹವಾದ ಅಪರಾಧವನ್ನು

ಎಸಗಿರುತ್ತಾರೆ ಎಂಬುದನ್ನು ಅಭಿಯೋಜನೆಯವರು ಸಂಶಯತೀತವಾಗಿ ರುಜುವಾತು ಪಡಿಸುತ್ತಾರೆಯೇ?

4. ಏನು ಆದೇಶ?

6. ಮೇಲ್ಕಂಡ ಅಂಶಗಳನ್ನು ಈ ಕೆಳಕಂಡಂತೆ ಉತ್ತರಿಸುತ್ತೇನೆ.

| | | | |
|---|---|---|---|
| ಅಂಶ ಸಂಖ್ಯೆ | : 1 | : | **ನಕರಾತ್ಮಕವಾಗಿ** |
| ಅಂಶ ಸಂಖ್ಯೆ | : 2 | : | **ನಕರಾತ್ಮಕವಾಗಿ** |
| ಅಂಶ ಸಂಖ್ಯೆ | : 3 | : | **ನಕರಾತ್ಮಕವಾಗಿ** |
| ಅಂಶ ಸಂಖ್ಯೆ | : 4 | : | ಅಂತಿಮ ಆದೇಶದಂತೆ,<br>ಈ ಕೆಳಕಂಡ ಕಾರಣಗಳಿಗಾಗಿ |

## ::ಕಾರಣಗಳು::

7. **ಅಂಶ ಸಂಖ್ಯೆ 1 ರಿಂದ 3** :- ಎಲ್ಲಾ ಅಂಶಗಳು ಒಂದಕ್ಕೊಂದು ಸಂಬಧಪಟ್ಟಿದ್ದು, ವಿಷಯಗಳ ಮತ್ತು ಸಾಕ್ಷ್ಯಗಳ ಪುನರಾವರ್ತನೆ ತಪ್ಪಿಸಲು ಇವುಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಂಡು ಚರ್ಚಿಸಿ ಕಾರಣ ನೀಡಿರುತ್ತೇನೆ.

8. ಅಭಿಯೋಜನೆಯವರು ಆರೋಪಿಯ ವಿರುದ್ಧ ಹೊರಿಸಿರುವ ಆರೋಪಗಳನ್ನು ರುಜುವಾತುಡಿಸಲು ತಮ್ಮ ಪರವಾಗಿ ಒಟ್ಟು 4 ಜನ ಸಾಕ್ಷಿದಾರರನ್ನು ಫ್ರಾಸಾ 1 ರಿಂದ 4 ರಂತೆ ವಿಚಾರಣೆಗೆ ಗುರಿಪಡಿಸಿರುತ್ತಾರೆ. ಹಾಗೆಯೇ ತಮ್ಮ ಪರವಾಗಿ ಒಟ್ಟು 13 ದಾಖಲೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮೇಣ ನಿಪಿ.1 ರಿಂದ 13 ಎಂಬುದಾಗಿ

ಗುರುತಿಸಿಕೊಂಡಿರುತ್ತಾರೆ.

9. ಅಭಿಯೋಜನೆಯು ಪ್ರತ್ಯಕ್ಷ ಸಾಕ್ಷಿದಾರರಾದ ಚಾಸಾ.3 ರವರನ್ನು ಪ್ರಾಸಾ 1 ಎಂದು ವಿಚಾರಣೆಗೊಳಪಡಿಸಿರುತ್ತಾರೆ. ಪ್ರಾಸಾ.1 ರವರು ತಮ್ಮ ವಿಚಾರಣೆಯಲ್ಲಿ ಮೃತ ಮೋಹನ್ ಬಿ ಮಾಂಡೇಕರ್ ನನಗೆ ಗೊತ್ತಿಲ್ಲ. ಈ ಪ್ರಕರಣದಲ್ಲಿ ನನಗೆ ಏನೂ ಗೊತ್ತಿಲ್ಲ. ಮೋಹನ್ ಬಿ ಮಾಂಡೇಕರ್ ರವರಿಗೆ ಏನಾಗಿತ್ತು ಎಂದು ನನಗೆ ಗೊತ್ತಿಲ್ಲ. ನಾನು ಪೋಲಿಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ನಾನು ಪ್ರತ್ಯಕ್ಷವಾಗಿ ಯಾವುದೇ ಅಪಘಾತವನ್ನು ನೋಡಿರುವುದಿಲ್ಲ ಎಂದು ಸಾಕ್ಷ್ಯ ನುಡಿಯುತ್ತಾರೆ. ಆದ್ದರಿಂದ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಅಭಿಯೋಜಕರು ಅವರನ್ನು ಪಾಟೀಸವಾಲು ಮಾಡಿರುತ್ತಾರೆ. ಆದರೆ ಪಾಟೀಸವಾಲಿನಲ್ಲಿ ಅಭಿಯೋಜನೆಯವರಿಗೆ ಲಾಭದಾಯಕವಾದ ಯಾವುದೇ ಅಂಶಗಳು ಕಂಡುಬಂದಿರುವುದಿಲ್ಲ.

10. ಅಭಿಯೋಜನೆಯು ದೂರುದಾರರಾದ ಚಾಸಾ.1 ರವರನ್ನು ಪ್ರಾಸಾ. 2 ಎಂದು ವಿಚಾರಣೆಗೊಳಪಡಿಸಿರುತ್ತಾರೆ. ಪ್ರಾಸಾ.2 ರವರು ತಮ್ಮ ವಿಚಾರಣೆಯಲ್ಲಿ ಮೃತ ಮೋಹನ್ ಮಾಂಡೇಕರ ನನ್ನ ತಂದೆ. ಅವರಿಗೆ ಸುಮಾರು 3 ವರ್ಷಗಳ ಹಿಂದೆ ಅಪಘಾತವಾಗಿತ್ತು. ಸದರಿ ಅಪಘಾತವು ಯಾವ ಸ್ಥಳದಲ್ಲಿ, ಯಾವ ವಾಹನದಿಂದ, ಯಾರ ತಪ್ಪಿನಿಂದ, ಯಾವ ರೀತಿ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ನಾನು ನಿಪಿ.2 ಕ್ಕೆ ಸಹಿಯನ್ನು ಪೋಲಿಸ್ ಠಾಣೆಯಲ್ಲಿ ಹಾಕಿರುತ್ತೇನೆ. ನಿಪಿ.2 ರಲ್ಲಿ ಬರೆದಿರುವ ಮಾಹಿತಿಗಳು ನನಗೆ ಗೊತ್ತಿಲ್ಲ ಎಂದು ಸಾಕ್ಷ್ಯ

ನುಡಿಯುತ್ತಾರೆ. ಆದ್ದರಿಂದ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಅಭಿಯೋಜಕರು ಅವರನ್ನು ಪಾಟೀಸವಾಲು ಮಾಡಿರುತ್ತಾರೆ. ಆದರೆ ಪಾಟೀಸವಾಲಿನಲ್ಲಿ ಅಭಿಯೋಜನೆಯವರಿಗೆ ಲಾಭದಾಯಕವಾದ ಯಾವುದೇ ಅಂಶಗಳು ಕಂಡುಬಂದಿರುವುದಿಲ್ಲ.

11. ಅಭಿಯೋಜನೆಯು ಪ್ರತ್ಯಕ್ಷ ಸಾಕ್ಷಿದಾರರಾದ ಚಾಸಾ. 2 ರವರನ್ನು ಪ್ರಾಸಾ 3 ಎಂದು ವಿಚಾರಣೆಗೊಳಪಡಿಸಿರುತ್ತಾರೆ. ಪ್ರಾಸಾ.3 ರವರು ತಮ್ಮ ವಿಚಾರಣೆಯಲ್ಲಿ ಮೃತ ಮೋಹನ್ ಮಾಂಡೇಕರ್ ನನಗೆ ಗೊತ್ತಿಲ್ಲ. ಅವರಿಗೆ ಏನಾಗಿತ್ತು ಎಂದು ನನಗೆ ಗೊತ್ತಿಲ್ಲ. ನಾನು ಯಾವುದೇ ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿರುವುದಿಲ್ಲ. ನಾನು ಪೋಲಿಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ನಿಪಿ.3 ರಿಂದ 5 ದಾಖಲೆಗಳಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಸದರಿ ದಾಖಲೆಗಳಿಗೆ ಪೋಲಿಸರ ಕೋರಿಕೆಯ ಮೇರೆಗೆ ನಾನು ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ ಮತ್ತು ಯಾವುದೇ ವಾಹನವನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದು ಸಾಕ್ಷ್ಯ ನುಡಿಯುತ್ತಾರೆ. ಆದ್ದರಿಂದ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಅಭಿಯೋಜಕರು ಅವರನ್ನು ಪಾಟೀಸವಾಲು ಮಾಡಿರುತ್ತಾರೆ. ಆದರೆ ಪಾಟೀಸವಾಲಿನಲ್ಲಿ ಅಭಿಯೋಜನೆಯವರಿಗೆ ಲಾಭದಾಯಕವಾದ ಯಾವುದೇ ಅಂಶಗಳು ಕಂಡುಬಂದಿರುವುದಿಲ್ಲ.

12. ಅಭಿಯೋಜನೆಯು ಪಂಚನಾಮೆ ಸಾಕ್ಷಿದಾರರಾದ ಚಾಸಾ.4 ರವರನ್ನು ಫ್ರಾಸಾ.4 ಎಂದು ವಿಚಾರಣೆಗೊಳಪಡಿಸಿರುತ್ತಾರೆ. ಫ್ರಾಸಾ.4 ರವರು ತಮ್ಮ ವಿಚಾರಣೆಯಲ್ಲಿ ನಿಪಿ.3 ರಿಂದ 5 ದಾಖಲೆಗಳಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಸದರಿ ದಾಖಲೆಗಳಿಗೆ ಪೋಲಿಸರ ಕೋರಿಕೆಯ ಮೇರೆಗೆ ನಾನು ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ ಮತ್ತು ಯಾವುದೇ ವಾಹನವನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದು ಸಾಕ್ಷ್ಯ ನುಡಿಯುತ್ತಾರೆ. ಆದ್ದರಿಂದ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಅಭಿಯೋಜಕರು ಅವರನ್ನು ಪಾಟೀಸವಾಲು ಮಾಡಿರುತ್ತಾರೆ. ಆದರೆ ಪಾಟೀಸವಾಲಿನಲ್ಲಿ ಅಭಿಯೋಜನೆಯವರಿಗೆ ಲಾಭದಾಯಕವಾದ ಯಾವುದೇ ಅಂಶಗಳು ಕಂಡು ಬಂದಿರುವುದಿಲ್ಲ.

13. ಸಾಕ್ಷಿದಾರರ ವಿಚಾರಣೆ ಮತ್ತು ದಾಖಲಾತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ ಅಭಿಯೋಜನೆಯು ಅಪಘಾತವು ನ್ಯಾಯಾಲಯದ ಮುಂದಿರುವ ಆರೋಪಿಯ ತಪ್ಪಿನಿಂದಲೇ ಅಪಘಾತ ಆಗಿದೆ ಎಂದು ರುಜವಾತು ಪಡಿಸುವಲ್ಲಿ ವಿಫಲರಾಗಿರುತ್ತಾರೆ. ಅಭಿಯೋಜನೆಯು ಅಪಘಾತವು ಆರೋಪಿಯ ತಪ್ಪಿಂದಲೇ ಆಗಿರುತ್ತದೆ ಎಂದು ರುಜುವಾತು ಪಡಿಸಲು ಯಾವುದೇ ಸಾಕ್ಷಿಗಳನ್ನು ವಿಚಾರಣೆಗೊಳಪಡಿಸುವುದಿಲ್ಲ. ಅಭಿಯೋಜನೆಯು ಫ್ರಾಸಾ.1 ರಿಂದ 4 ರವರನ್ನು ಪಾಟೀ ಸವಾಲು ಮಾಡಿದಾಗ್ಯೂ ಲಾಭದಾಯಕವಾದ ಅಂಶಗಳು ಕಂಡುಬಂದಿರುವುದಿಲ್ಲ. ಸದರಿ ಪ್ರಕರಣದಲ್ಲಿರುವ ದಾಖಲೆಗಳನ್ನು ಪರಿಶೀಲಿಸಲಾಗಿ ಮೋಹನ್ ಬಿ ಮಾಂಡೇಕರ್ ರವರು ಮರಣ ಹೊಂದಿರುವ

ಬಗ್ಗೆ ಯಾವುದೇ ತಕರಾರು ಇರುವುದಿಲ್ಲ, ಆದರೆ ಅಭಿಯೋಜನೆಯು ಅಪಘಾತವು ಆರೋಪಿಯ ಅತಿ ವೇಗ ಮತ್ತು ಅಜಾಗರೂಕತೆಯಿಂದ ಆಗಿರುತ್ತದೆಂದು ರುಜುವಾತುಪಡಿಸುವಲ್ಲಿ ವಿಫಲರಾಗಿರುತ್ತಾರೆ.

14. ಈ ಮೇಲೆ ಹೇಳಿದ ಎಲ್ಲಾ ಕಾರಣಗಳಿಂದಾಗಿ ಅಪಘಾತದಲ್ಲಿ ಸದರಿ ಮೋಹನ್ ಬಿ ಮಾಂಡೇಕರ್ ಎಂಬುವವರು ಮೃತಪಟ್ಟಿರುತ್ತಾರೆ ಎಂಬುದು ಈ ನ್ಯಾಯಾಲಯದ ಗಣನೆಗೆ ಬಂದರೂ ಸಹ, ಸದರಿ ಅಪಘಾತಕ್ಕೆ ಆರೋಪಿತನೇ ಕಾರಣನಾಗಿರುತ್ತಾನೆ ಎಂಬ ಅಂಶವನ್ನು ಅಭಿಯೋಜನೆಯು ರುಜುವಾತುಪಡಿಸಲು ವಿಫಲರಾಗಿರುತ್ತಾರೆ. ಈ ಎಲ್ಲಾ ಕಾರಣಗಳಿಂದ ಸಂಶಯದ ಲಾಭವನ್ನು ಆರೋಪಿತನಿಗೆ ನೀಡುವುದಾಗಿ ಈ ನ್ಯಾಯಾಲಯವು ಅಭಿಪ್ರಾಯಪಟ್ಟು, ಸದರಿ ***ಅಂಶ ಸಂಖ್ಯೆ 1 ರಿಂದ 3 ಕ್ಕೆ  ನಕಾರಾತ್ಮಕವಾಗಿ*** ಉತ್ತರಿಸಿದೆ.

15. **ಅಂಶ ಸಂಖ್ಯೆ 4 :-** ಈ ಮೇಲ್ಕಂಡ ವಿವಾದಾಂಶದಲ್ಲಿ ಚರ್ಚಿಸಲಾದ ಕಾರಣಗಳಿಂದಾಗಿ, ಅಂತಿಮ ಆದೇಶ ಈ ಕೆಳಕಂಡಂತೆ.

## ::ಆದೇಶ::

ದಂಡ ಪ್ರಕ್ರಿಯಾ ಸಂಹಿತೆ ಕಲಂ 255 (1)ರ ಅಡಿಯಲ್ಲಿ ವರ್ತಿಸುತ್ತಾ ಆರೋಪಿಯ ವಿರುದ್ಧ ಭಾ.ದಂ.ಸಂ.ಕಲಂ 279, 337 ಮತ್ತು 304(ಎ) ಐಪಿಸಿ ಕಾಯ್ದೆ ಅಡಿಯಲ್ಲಿ ಹೊರಿಸಲಾದಂತಹ ಆರೋಪದಿಂದ ಆರೋಪಿಯನ್ನು ದೋಷಮುಕ್ತಿಗೊಳಿಸಿ ಬಿಡುಗಡೆ ಮಾಡಲಾಗಿದೆ.

ಆರೋಪಿಯ ಮತ್ತು ಜಾಮೀನುದಾರರ ಮುಚ್ಚಳಿಕೆ ಪತ್ರಗಳನ್ನು ಅಫೀಲು ಅವಧಿ ಮುಗಿದ ನಂತರ ರದ್ದುಪಡಿಸಲು ಆದೇಶಿಸಿದೆ.

ಆರೋಪಿ ದಂಡ ಪ್ರಕ್ರಿಯಾ ಸಂಹಿತೆ ಕಲಂ437(ಎ) ಅಡಿಯಲ್ಲಿ ಬರೆದುಕೊಟ್ಟ ಜಾಮೀನು ಮುಚ್ಚಳಿಕೆಯನ್ನು 6 ತಿಂಗಳ ನಂತರ ರದ್ದುಪಡಿಸಲು ಆದೇಶಿಸಲಾಗಿದೆ.

*(ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದಲ್ಲಿ ಉಕ್ತಲೇಖನ ನೀಡಿ ಬಳಿಕ ಅನುಲಿಪಿಯನ್ನು ಪರಿಶೀಲಿಸಿ, ತಿದ್ದಿ ಬಹಿರಂಗ ನ್ಯಾಯಾಲಯದಲ್ಲಿ ಈ ದಿನ ಅಂದರೆ ದಿನಾಂಕ 25* ***ನೇ ಜುಲೈ*** *2026 ರಂದು ಘೋಷಿಸಿದ್ದೇನೆ).*

**Sd/-**

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಕುಣಿಗಲ್.

**::ಅನುಬಂಧ::**

**ಅಭಿಯೋಜನೆಯ ಪರ ವಿಚಾರಣೆಗೊಳಪಟ್ಟ ಸಾಕ್ಷಿದಾರರ ಪಟ್ಟಿ:-**

| | | |
|---|---|---|
| ಫ್ರಾಸಾ-1 | : | ಭಾರ್ಗವಿ |
| ಫ್ರಾಸಾ-2 | : | ಸಾಗರ್ |
| ಫ್ರಾಸಾ-3 | : | ಹರೀಶ್ |
| ಫ್ರಾಸಾ-4 | : | ಮಂಜುನಾಥ ಟಿ.ಎಂ |

**ಅಭಿಯೋಜನೆಯ ಪರ ಗುರುತಿಸಲ್ಪಟ್ಟ ದಾಖಲೆಗಳ ಪಟ್ಟಿ:-**

| | | |
|---|---|---|
| ನಿಪಿ-1 | : | ಸಾಕ್ಷಿ ಒಪ್ಪಿಕೊಳ್ಳದ ಹೇಳಿಕೆ ಭಾಗ |
| ನಿಪಿ-2 | : | ದೂರು |
| ನಿಪಿ-3 | : | ಸ್ಥಳ ಪಂಚನಾಮೆ |

| | | |
|---|---|---|
| ನಿ.ಪಿ.4 | : | ಕಚ್ಚಾನಕಾಶೆ |
| ನಿ.ಪಿ.5 | : | ವಾಹನ ಪರೀಶೀಲನಾ ಪಂಚನಾಮೆ |
| ನಿ.ಪಿ.6 | : | ಪ್ರತ್ಯಕ್ಷ ಸಾಕ್ಷಿದಾರರ ಹೇಳಿಕೆ |
| ನಿ.ಪಿ.7 | : | ಶವ ತನಿಖಾ ವರದಿ |
| ನಿ.ಪಿ.8 | : | ಶವ ಪರೀಕ್ಷಾ ವರದಿ |
| ನಿ.ಪಿ.9 | : | ಗಾಯದ ಪ್ರಮಾಣ ಪತ್ರ |
| ನಿ.ಪಿ.10 | : | ಐ.ಎಂ.ವಿ ವರದಿ |
| ನಿ.ಪಿ.11 | : | ನೋಟಿಸ್ |
| ನಿ.ಪಿ.12 | : | ಪ್ರತ್ಯುತ್ತರ |
| ನಿ.ಪಿ.13 | : | ನಷ್ಟ ಭರ್ತಿ ಪತ್ರ |

**ಮುದ್ದೆಮಾಲುಗಳ ಪಟ್ಟಿಃ-**

–ಇಲ್ಲ–

**ಆರೋಪಿ ಪರ ಸಾಕ್ಷಿದಾರರುಗಳ ಪಟ್ಟಿಃ-**

–ಇಲ್ಲ–

**ಆರೋಪಿಯ ಪರ ಗುರುತಿಸಲ್ಪಟ್ಟ ದಾಖಲೆಗಳ ಪಟ್ಟಿಃ-**

–ಇಲ್ಲ–

**Sd/–**

ಅಪರ ಸಿವಿಲ್ ನ್ಯಾಯಾಧೀಶರು ಮತ್ತು

ಜೆ.ಎಂ.ಎಫ್.ಸಿ, ಕುಣಿಗಲ್.